ಕಥೆ

# ಪಾರಿಜಾತದ ನೆರಳು




ಎಚ್‌ ಆರ್‌ ರಮೇಶ

ಕಲೆ: ಮುರಳೀಧರ ರಾಥೋಡ್




ಮಾರುಕಟ್ಟೆಯಲ್ಲಿ ಚಮರಿ ಮೃಗದ ಉಣ್ಣೆಯಿಂದ ನೇಯ್ದ ಕಂಬಳಿಗಳಿಗೆ ಆಕರ್ಷಿತನಾಗಿ ಕ್ಷಣ ರಸ್ತೆಯಲ್ಲೇ ನಿಂತ. ನಂತರ ಆ ಅಂಗಡಿಯ ಕಡೆ ನಡೆದ. ಹಿಮ ಸುರಿಯುತ್ತಿದೆ. ತಕ್ಷಣಕ್ಕೆ ಅವನಿಗೆ ನೆನಪು ಬಂತು. ಟಿ.ವಿ. ಪರದೆಯ ಮೇಲೆ ಚಮರಿ ಮೃಗಗಳು. ಹಿಮಾಲಯದ ತಪ್ಪಲಿನಲ್ಲಿ. ಅವುಗಳನ್ನೇ ನೋಡುತ್ತಿದ್ದಾನೆ. ಎದುರಿನ ಪುಟ್ಟ ಟೀಪಾಯಿಯ ಮೇಲೆ ದಾಸವಾಳದ ಚಹಾ. ಕೆಂಪನೆ ಬಣ್ಣದಲ್ಲಿ ಮೋಹಕವಾಗಿ ಗಾಜಿನ ಕಪ್ಪಿನಲ್ಲಿ ತುಂಬಿಕೊಂಡಿದೆ. ಅದರ ಬಿಸಿ ಆರಿ ತಣ್ಣಗಾಗಿದೆ. ಅವಳು ಬಂದು ಅವನ ಕೆನ್ನೆಗೆ ಮುತ್ತನ್ನು ಕೊಟ್ಟಳು. ಅವನು ತದೇಕಚಿತ್ತದಲ್ಲಿ ಟಿ.ವಿ ಪರದೆಯ ಮೇಲಿನ ಹಿಮ ಮತ್ತು ಅದರೊಳಗೆ ಇರುವ ಚಮರಿ ಮೃಗಗಳನ್ನು ನೋಡುತ್ತಿದ್ದಾನೆ. ಮತ್ತೊಂದು ಮುತ್ತನ್ನು ಕೊಟ್ಟಳು ಮತ್ತೊಂದು ಕೆನ್ನೆಗೆ.

ಉದ್ದೇಶಪೂರ್ವಕವೆಂಬಂತೆ ತಕ್ಷಣಕ್ಕೆ ಕರೆಂಟು